# ಗುರುದಕ್ಷಿಣೆ

ಗುರುಕುಲದಲ್ಲಿ ಸಕಲ ವಿದ್ಯೆಗಳನ್ನು ಕಲಿತು ಪ್ರವೀಣರಾದ ಯುವರಾಜ ವಿಕ್ರಮ ಹಾಗೂ ಬಾಲ್ಯದ ಮಿತ್ರ ಸುಚೇತ ಮರಳಿ ನಗರದತ್ತ ಹೊರಟುನಿಂತರು. ಆಗ ಶಿಷ್ಯರಿಗೆ ಆಶೀರ್ವಾದ ಮಾಡುತ್ತಾ 'ವಿದ್ಯಾವಂತರಾದ ನೀವಿಬ್ಬರೂ ಜೀವನ ಸಾರ್ಥಕವಾಗುವಂತೆ ಬಾಳಿ. ಯಶಸ್ಸುಗಳಿಸಿ' ಎಂದರು ಗುರುಗಳು.

ಗುರುಗಳಿಗೆ ವಂದಿಸುತ್ತಾ 'ನಿಮ್ಮ ಕೃಪಾಶೀರ್ವಾದದಿಂದ ಜ್ಞಾನವಂತರಾದೆವು. ಗುರುದಕ್ಷಿಣೆಯಾಗಿ ಏನನ್ನೂ ಅಪೇಕ್ಷಿಸುವಿರೋ ನಾವು ನೀಡಲು ಸಿದ್ಧ' ಎಂದರು ಏಕಕಂಠದಿಂದ. ನಸುನಕ್ಕ ಪೂಜ್ಯರು 'ಹಾಗೇನು! ಆ ಸಮಯ ಬರಲಿ. ನಾವೇ ಖುದ್ದಾಗಿ ನಿಮ್ಮಲ್ಲಿಗೆ ಬಂದು ಗುರುದಕ್ಷಿಣೆ ಪಡೆಯುತ್ತೇವೆ' ಎಂದು ಹೇಳಿ ಪ್ರಯಾಣ ಮಾಡಲು ಅಪ್ಪಣೆ ಕೊಟ್ಟರು. ಇಬ್ಬರೂ ನಗರಕ್ಕೆ ಬಂದರು.

ಕಾಲಚಕ್ರ ಉರುಳಿತು. ಈಗ ವಿಕ್ರಮನೇ ಆ ನಾಡಿನ ಮಹಾರಾಜನಾಗಿ ಆಡಳಿತ ನಡೆಸತೊಡಗಿದ. ಸುಚೇತ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸತೊಡಗಿದ.

ಹೀಗಿರುವಾಗ ಅವರಿಗೆ ವಿದ್ಯೆ ಕಲಿಸಿದ ಗುರುಗಳು ರಾಜ್ಯಕ್ಕೆ ಆಗಮಿಸುವ ವಾರ್ತೆ ಮಹಾರಾಜನಾದ ವಿಕ್ರಮನಿಗೆ ತಲುಪಿತು. ಬಹಳ ಸಂತಸಗೊಂಡ ವಿಕ್ರಮರಾಜ ಗುರುವಿನ ಸ್ವಾಗತಕ್ಕಾಗಿ ಅದ್ದೂರಿ ವ್ಯವಸ್ಥೆ ಮಾಡಿದ. ನಗರವನ್ನು ತಳಿರು–ತೋರಣಗಳಿಂದ ಸಿಂಗರಿಸಿ, ಗೌರವ, ಭಕ್ತಿಯಿಂದ ಗುರುವಿನ ಸ್ವಾಗತ ಮಾಡಿದ.

ಅರಮನೆಯಲ್ಲಿ ಆಸೀನರಾಗಿದ್ದಾಗ ಮಹಾರಾಜ ಅವರಿಗೆ ತಟ್ಟೆಯಲ್ಲಿ ಬಂಗಾರನಾಣ್ಯ, ಪಟ್ಟೆ ಪೀತಾಂಬರ ಉಡುಗೊರೆ ಕೊಟ್ಟು 'ಪೂಜ್ಯರೇ, ಸ್ವೀಕರಿಸಿ ನಿಮ್ಮ ಶಿಷ್ಯನ ಗುರುದಕ್ಷಿಣೆ' ಎಂದು ಭಿನ್ನೈಸಿದ. ಆಗ ಅಲ್ಲಿಗೆ ಸುಚೇತ ಬಂದಿದ್ದ. ಕೇವಲ ಹೂ– ಹಣ್ಣನ್ನು ತಂದು ಗುರುಗಳಿಗೆ ಸಮರ್ಪಿಸಿ 'ಈ ಬಡವನ ಅಲ್ಪ ಕಾಣಿಕೆಯನ್ನು ದಯವಿಟ್ಟು ಸ್ವೀಕರಿಸಿ' ಎಂದ.

ಆಗ ಗುರುಗಳು ನಸುನಕ್ಕು ಹೇಳಿದರು, 'ಸುಚೇತ ನೀನು ಬಡವನಾದರೂ ಕಷ್ಟಪಟ್ಟು ದುಡಿದು ದೀನದಲಿತರಿಗೆ, ಬಡವರಿಗೆ ದಾನ–ಧರ್ಮ ಮಾಡುತ್ತಿರುವೆ. ನ್ಯಾಯ, ನೀತಿ, ಧರ್ಮಗಳೇ ನಿನ್ನ ಉಸಿರಾಗಿವೆ. ಇದಕ್ಕಿಂತ ಬೆಲೆಬಾಳುವ ವಸ್ತುಗಳು ಈ ಪ್ರಪಂಚದಲ್ಲಿಲ್ಲ. ಆದರೆ ಮಹಾರಾಜನಾದ ವಿಕ್ರಮ ಮಾತ್ರ ರಾಜ್ಯದಲ್ಲಿ ಮಳೆ ಬಾರದೇ ಭೀಕರ ಬರಗಾಲದಿಂದ ಪ್ರಜೆಗಳು ಅನ್ನ– ನೀರಿಲ್ಲದೇ ಸಂಕಷ್ಟಕ್ಕೀಡಾದರೂ ಅತ್ತ ಗಮನ ಹರಿಸದೇ ಮೋಜಿನಿಂದ ಕಾಲಹರಣ ಮಾಡುತ್ತಿರುವುದು ಯಾವ ನ್ಯಾಯ? ಇಂದಿನಿಂದಲೇ ಪ್ರಜೆಗಳ ಹಿತಕ್ಕಾಗಿ ಶ್ರಮಿಸು. ಕೆರೆ, ಬಾವಿಗಳನ್ನು ಕಟ್ಟಿಸು. ರಾಜ್ಯದ ಜನರ ಸಂರಕ್ಷಣೆ ಮಾಡುವವನೇ ನಿಜವಾದ ಅರಸ. ಅದೇ ನೀವು ನನಗೆ ಕೊಡುವ ಗುರುದಕ್ಷಿಣೆ' ಎಂದಾಗ ವಿಕ್ರಮರಾಜ ಕ್ಷಮೆ ಕೋರಿ ಆಡಳಿತದತ್ತ ಗಮನಹರಿಸಿದ.

**–ಅಮರಯ್ಯಾ ಪತ್ರಿಮಠ, ಸುರಪುರ**



# ಯೋಧನಾಗುವ ಆಸೆ



ಸ್ವಾರ್ಥವನ್ನು ತ್ಯಜಿಸುವೆ
ದೇಶ ಮೊದಲು ಎನ್ನುವೆ
ದೇಶಕ್ಕಾಗಿ ದುಡಿಯುವ
ಜನರ ಸುಖವ ಬಯಸುವೆ

ದೇಶ ಕಾಯ್ವ ಯೋಧನಾಗುವೆ
ಪ್ರಾಣವನ್ನೇ ಮೀಸಲಿಡುವೆ
ಭಾರತಾಂಬೆ ರಕ್ಷಿಸುವೆ
ತಾಯ ಋಣವ ತೀರಿಸುವೆ

ರಕ್ತ ಸಿಕ್ತ ದೇಹಗಳ
ಕಂಡು ಎದೆಗುಂದದೆ
ಗುಂಡಿಗೆ ಎದೆಯೊಡ್ಡುತ
ವಿರೋಧಿಗಳ ಸದೆ ಬಡಿಯುವೆ

ಕೆಚ್ಚೆದೆಯಲಿ ಹೋರಾಡಿ
ಶತ್ರು ನಾಶ ಮಾಡುವೆ
ಗುಂಡಿನ ಮಳೆಗರೆಯುತ
ಎಲ್ಲರೆದೆಯ ನಡುಗಿಸುವೆ

ರಾಷ್ಟ್ರಕ್ಕಾಗಿ ಪ್ರಾಣ ತೆತ್ತು
ತಾಯ ಮುಡಿಗೆ ಮುಕುಟವಿತ್ತು
ತೀರಿಸುವೆ ತಾಯ ಋಣವ
ಈ ಒಂದು ಜನ್ಮದಲಿ

**–ಲಲಿತ ತೋಂಟಾರಾಧ್ಯ, ಗುಬ್ಬಿ**